ಸಹಾಯದಿಂದ ನೋಡಿಕೊಳ್ಳುವುದು ಬಿಟ್ಟರೆ ಅವರಿಗೆ ಅಂತಹ ಕೆಲಸವೇನಿರಲಿಲ್ಲ. ಅಡಕೆ ತೋಟಕ್ಕಾಗಲಿ, ಗದ್ದೆಗಳಿಗಾಗಲಿ ಅವರು ದಿನನಿತ್ಯ ಹಾಜರಿ ಹಾಕಬೇಕೆಂದಿರಲಿಲ್ಲ. ಪ್ರಾಮಾಣಿಕವಾಗಿ ದುಡಿಯುವ ಆಳು ಮಕ್ಕಳಿಗೆ ಯಥೇಚ್ಛ ಊಟ, ಬಟ್ಟೆ, ಕೂಲಿ ಕೊಡುವ ಅವರಲ್ಲಿ ದುಡಿಯಲು ಕೆಲಸಗಾರರು ಸ್ಪರ್ಧೆಯೆಂಬಂತೆ ಸೇರಿಕೊಳ್ಳಲು ಇಚ್ಛಿಸುತ್ತಿದ್ದರು.

ಸುಬ್ರಾಯ ಹೆಗಡೆಯವರಿಗೂ, ಅಪ್ಪುರಾಯ ಕಾಮತರಿಗೂ ವಯಸ್ಸಿನ ಅಂತರ ಸಾಕಷ್ಟಿತ್ತು. ಆದರೆ, ಅಪರೂಪಕ್ಕೆ ಮುಂಬಯಿಯಿಂದ ತನ್ನ ಸ್ವಂತ ಊರಿಗೆ ಬಂದಾಗ ತನ್ನವರು ಎನ್ನುವವರು ಯಾರೂ ಇಲ್ಲದಿದ್ದುದರಿಂದ ತನ್ನ ಕಿರಿಯ ಸ್ನೇಹಿತನಲ್ಲೇ ತಂಗಿ, ಒಂದೆರಡು ಬಯಲಾಟ ನೋಡಿ, ತಾನು ಕೈಗೊಳ್ಳಲಿರುವ ಸಮಾಜಮುಖೀ, ರಚನಾತ್ಮಕ ಕಾರ್ಯಕ್ರಮಗಳ ಕುರಿತು ರೂಪುರೇಷೆ ಹಾಕಿಕೊಂಡು, ಈ ಕೆಲಸಕಾರ್ಯಗಳಿಗೆ ಬೇಕಾದ ಅಂದಾಜು ವೆಚ್ಚದ ಹಣವನ್ನು ಹೆಗಡೆಯವರಿಗೊಪ್ಪಿಸಿ ಅವುಗಳನ್ನು ನೆರವೇರಿಸುವ ಜವಾಬ್ದಾರಿಯನ್ನು ಅವರ ಹೆಗಲಿಗೇರಿಸುತ್ತಿದ್ದರು.

ಎಳವೆಯಲ್ಲಿಯೇ ತಾಯಿ ತಂದೆಯವರನ್ನು ಸಿಡುಬಿನಿಂದ ಕಳೆದುಕೊಂಡ ಅಪ್ಪುರಾಯರನ್ನು ಅವರ ಕಿತ್ತು ತಿನ್ನುವ ಬಡತನದ ನಡುವೆಯೂ ಸೋದರತ್ತೆಯೇ ಸಾಕಿದ್ದರು. ಊರಿನಲ್ಲಿ ಭೂಮಿಕಾಣೆ, ಉದ್ಯೋಗ ಏನೂ ಇಲ್ಲದ ಆಕೆಯ ಪತಿ ಉದ್ಯೋಗವನ್ನರಸಿ ಮುಂಬಯಿಗೆ ಹೋಗುವಾಗ ಜೊತೆಯಲ್ಲಿ ಸುಮಾರು ಹತ್ತು ವರ್ಷ ಪ್ರಾಯದ ಅಪ್ಪುರಾಯನನ್ನು ಒಯ್ದಿದ್ದರು. ಗುರುತು ಪರಿಚಯವಿಲ್ಲದ ಊರು. ಜೋನಿಬೆಲ್ಲದ ಭರಣಿಗೆ ಧಾಂಗುಡಿ ಇಡುವ ಇರುವೆಗಳಂತೆ ಜನ. ಈ ನಡುವೆ ಅವರನ್ನು ಮುಂಬಯಿ ಬೋರಿಬಂದರ್ ರೇಲ್ವೆ ನಿಲ್ದಾಣದವರೆಗೆ ಕರೆತಂದ ಮಾವ, ದೇಹ ಬಾಧೆ ತೀರಿಸಿಕೊಳ್ಳಲೆಂದು ಹೋದವರು ನಾಪತ್ತೆಯಾಗಿದ್ದರು. ಬಾಲಕ ಅಪ್ಪುರಾಯನಿಗೆ ದಿಕ್ಕೇ ತೋಚಲಿಲ್ಲ. ವಿಕ್ಟೋರಿಯ ಟರ್ಮಿನಸ್ ಎಂದೇ ಕರೆಸಿಕೊಳ್ಳುತ್ತಿದ್ದ ಬೋರಿಬಂದರ್ ರೇಲ್ವೆ ನಿಲ್ದಾಣದ ಕಂಬಕ್ಕೊರಗಿ ಅಳುತ್ತ ಕೂತ. ಹಸಿವು, ಬಾಯಾರಿಕೆಗಳಿಂದ ಬಸವಳಿದ ಆತನಿಗೆ ಜೀವ ಬಾಯಿಗೆ ಬಂದಂತಾಗಿತ್ತು. ಆಗ ಅವನ ಗಮನಕ್ಕೆ ಬಂದ ನೀರಿನ ನಲ್ಲಿ ಆತನ ಬಾಯಾರಿಕೆಯನ್ನೇನೋ ಹಿಂಗಿಸಿತು. ಹಸಿವು ಅವನ ಪ್ರಾಣ ಹಿಂಡುತ್ತಿತ್ತು. ಮಾವ ತಿನ್ನಲು ಏನಾದರೂ ತಂದಾನು ಎನ್ನುವ ಭರವಸೆಯೂ ಈಗ ನೆಲಕಚ್ಚಿತ್ತು.

ಹೀಗೆ ಬೋರಿಬಂದರ್ ಸ್ಟೇಶನ್‌ನಲ್ಲಿ ಅನ್ನಾಹಾರವಿಲ್ಲದೆ ಅಳುತ್ತ ಕುಳಿತ ಬಾಲಕ ಅಪ್ಪುರಾಯ ಪುಣೆಯಿಂದ ಮರಳುತ್ತಿದ್ದ ಬೆಹರಾಮ್‌ಜೀ ಮಿಸ್ತ್ರಿಯವರ ಕಣ್ಣಿಗೆ ಬಿದ್ದ. ಅಳುತ್ತಿರುವ ಬಾಲಕನನ್ನು ಏನು, ಎತ್ತ ಎಂದು ವಿಚಾರಿಸುವಾಗ ಅವನಿಗೆ ಕೊಂಕಣಿ, ಕನ್ನಡ ಬಿಟ್ಟು ಬೇರಾವುದೇ ಭಾಷೆ ಬರುವುದಿಲ್ಲ ಎಂದು ಬೆಹರಾಮ್‌ಜೀಯವರಿಗೆ ಗೊತ್ತಾಯಿತು. ಮುಂಬಯಿಯ ಕೋಟೆ (ಫೋರ್ಟ್) ಪ್ರದೇಶದಲ್ಲಿ ವ್ಯವಹಾರವಿದ್ದು ಅಲ್ಲಿನ ಕನ್ನಡ, ತುಳು ಭಾಷಿಕರ ಸಂಪರ್ಕವಿದ್ದ ಮಿಸ್ತ್ರಿಯವರು ಕನ್ನಡ ಮಾಧ್ಯಮದ ರಾತ್ರಿ ಶಾಲೆಯನ್ನೂ ತಮಗೆ ಸೇರಿದ ಕಟ್ಟಡದಲ್ಲಿ ನಡೆಸುತ್ತಿದ್ದು, ಅಲ್ಪಸ್ವಲ್ಪ ಕನ್ನಡ ಬಲ್ಲವರಾಗಿದ್ದರು. ಹೀಗಾಗಿ, ಹುಡುಗ ಆಸರೆ ಇಲ್ಲದೆ ಹಸಿವು, ಭಯದಿಂದ ಕಂಗೆಟ್ಟಿದ್ದಾನೆ ಎಂದು ಅವರಿಗೆ ಗೊತ್ತಾಯಿತು. ಸ್ವಾಭಾವಿಕವಾಗಿ ತುಂಬ ಮೃದು ಹೃದಯಿಯಾಗಿದ್ದ ಮಿಸ್ತ್ರಿಯವರು ಮೊದಲು ಮಾಡಿದ ಕೆಲಸವೆಂದರೆ, ಬೋರಿಬಂದರ್‌ನ ಪರಿಸರದಲ್ಲಿದ್ದ ಉಡುಪಿ ಹೋಟೆಲಿಗೆ ಅಪ್ಪುರಾಯನನ್ನು ಕರೆದೊಯ್ದು, ಅವನಿಗೆ ಹೊಟ್ಟೆ ತುಂಬ ತಿನ್ನಿಸಿದ್ದು. ಅಲ್ಲಿನ ಕೆಲಸಗಾರರಿಂದ ಹುಡುಗನ ಪೂರ್ವಾಪರ ವಿಚಾರಿಸಿ, ನನ್ನೊಂದಿಗೆ ಬರುತ್ತೀಯಾ? ಎಂದು ಕೇಳಿದ್ದು.

ಹುಡುಗ ಒಮ್ಮೆ ಬೆಹರಾಮಜೀಯವರತ್ತ ದೃಷ್ಟಿ ಹರಿಸಿದ. ಎತ್ತರದ ಆಳ್ತನ, ದಪ್ಪ ಹುಬ್ಬಿನ ಕೆಳಗೆ ಕರುಣೆ ಸೂಸುವ ಕಣ್ಣುಗಳು. ಗುಲಾಬಿ ಬಣ್ಣದ ಕಪೋಲಗಳು, ನಾಲ್ಕಾರು ದಿನ ನಾಪಿತನಿಗೊಪ್ಪಿಸದೆ ಬೆಳೆದು ನಿಂತ ಗಡ್ಡ–ಮೀಸೆಗಳನ್ನು, ಬಿಳಿ–ಪೈಜಾಮಾದ ಮೇಲೆ ತೊಟ್ಟ ಮೊಣಕಾಲಿಗೆ